ಇಲಾಖೆ / ವಿಷಯ: DEPARTMENT / SUBJECT: ಸಚಿವ ಸಂಪುಟ (ಕೇಂದ್ರ)

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ ದಿನಾಂಕ : DATE : 11/07/2019

ಪೋಕ್ಸೊ ಕಾಯಿದೆಗೆ ಮತ್ತಷ್ಟು ಬಲ | ಸಂಪುಟ ಸಭೆಯಲ್ಲಿ ಅನುಮೋದನೆ

# ಮಕ್ಕಳ ಅತ್ಯಾಚಾರಿಗಳಿಗೆ ಗಲ್ಲು

**ಹೊಸದಿಲ್ಲಿ:** ಮಕ್ಕಳ ಮೇಲೆ ಹೆಚ್ಚುತ್ತಿರುವ ಲೈಂಗಿಕ ದೌರ್ಜನ್ಯಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ 'ಪೋಕ್ಸೊ' ಕಾಯಿದೆಯನ್ನು ಮತ್ತಷ್ಟು ಕಠಿಣಗೊಳಿಸಲು ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಇದಕ್ಕಾಗಿ ಪೋಕ್ಸೊ ಕಾಯಿದೆಯ ಸುಮಾರು 11ಕ್ಕೂ ಹೆಚ್ಚು ಸೆಕ್ಷನ್‌ಗಳನ್ನು ಪರಿಷ್ಕರಿಸಿ ತಪ್ಪಿತಸ್ಥರಿಗೆ ಮರಣ ದಂಡನೆ, ಭಾರಿ ದಂಡ ವಿಧಿಸಲು ಅವಕಾಶವಾಗುವಂತೆ ಕಠಿಣ ನಿಯಮಗಳನ್ನು ಸೇರಿಸಲಾಗುವುದು. ಮಕ್ಕಳನ್ನು ಲೈಂಗಿಕ ಕಿರುಕುಳದಿಂದ ರಕ್ಷಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದು ಸರಕಾರ ಹೇಳಿದೆ.

ಪ್ರಕೃತಿ ವಿಕೋಪ ಮುಂತಾದ ಸಂದರ್ಭಗಳಲ್ಲಿ ಮಕ್ಕಳಿಗೆ ಹಾರ್ಮೋನ್ ಅಥವಾ ಇತರೆ ರಾಸಾಯನಿಕ ವಸ್ತುಗಳನ್ನು ನೀಡಿ ಅವರನ್ನು ಲೈಂಗಿಕ ಉದ್ದೇಶಕ್ಕೆ ಬಳಸಿಕೊಳ್ಳುವುದನ್ನು ತಡೆಯುವುದು, ಮಕ್ಕಳ ಅಶ್ಲೀಲ ದೃಶ್ಯಗಳ ಚಿತ್ರಣ ಹಾಗೂ ಪ್ರಸಾರ ಮುಂತಾದ ಅಪರಾಧಗಳಿಗೂ ಕಠಿಣ ಶಿಕ್ಷೆ ಬೀಳಲಿದೆ. ಮಕ್ಕಳನ್ನು ಒಳಗೊಂಡ ಅಶ್ಲೀಲ ದೃಶ್ಯಗಳ ಸಂಗ್ರಹ, ಪ್ರಸಾರವನ್ನು ಪರಿಷ್ಕೃತ ಕಾಯಿದೆಯಡಿ ಗಂಭೀರ ಅಪರಾಧವಾಗಿ ಪರಿಗಣಿಸಲಾಗುವುದು.

ಅಲ್ಲದೆ, ಅಪರಾಧಿಗಳು ಕಾನೂನು ಲೋಪಗಳನ್ನು ಬಳಸಿಕೊಂಡು ಸುಲಭವಾಗಿ ಕಠಿಣ ಶಿಕ್ಷೆಯಿಂದ ಪಾರಾಗುವುದನ್ನು ತಡೆಯಲು 'ಲೈಂಗಿಕ ಕಿರುಕುಳ' ಹಾಗೂ ಹಲವು ಅಪರಾಧಗಳಿಗೆ ಕಾಯಿದೆಯಲ್ಲಿ ಮತ್ತಷ್ಟು ಸ್ಪಷ್ಟ ವ್ಯಾಖ್ಯಾನಗಳನ್ನು ನೀಡಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಬುಧವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.




## ಅಂತರ ರಾಜ್ಯ ನದಿ ವಿವಾದ ಇತ್ಯರ್ಥಕ್ಕೆ ಒಂದೆ ಶಾಶ್ವತ ನ್ಯಾಯಾಧಿಕರಣ

ಎಲ್ಲಾ ಅಂತರರಾಜ್ಯ ನದಿ ವಿವಾದಗಳ ತ್ವರಿತ ಇತ್ಯರ್ಥಕ್ಕಾಗಿ ಒಂದೇ ಶಾಶ್ವತ ನ್ಯಾಯಾಧಿಕರಣ ಸ್ಥಾಪಿಸುವ ಪ್ರಸ್ತಾವನೆಗೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರೆತಿದೆ. ಪ್ರಸ್ತುತ ಅಸ್ತಿತ್ವದಲ್ಲಿರುವ ಕಾವೇರಿ, ಮಹದಾಯಿ, ರಾವಿ, ಬಿಯಾಸ್, ಕೃಷ್ಣಾ ಸೇರಿದಂತೆ ಒಟ್ಟು 9 ಅಂತರ ರಾಜ್ಯ ನದಿ ವಿವಾದ ನ್ಯಾಯಾಧಿಕರಣಗಳು ಇದರಲ್ಲಿ ವಿಲೀನವಾಗಲಿವೆ. ಹಾಲಿ ನ್ಯಾಯಾಧಿಕರಣಗಳಲ್ಲಿ ವಿವಾದ ಇತ್ಯರ್ಥಗೊಳಿಸಲು 17ರಿಂದ 27 ವರ್ಷ ಸಮಯ ಹಿಡಿದಿದೆ. ಆದರೆ, ಉದ್ದೇಶಿತ ನ್ಯಾಯಧಿಕರಣವು ಯಾವುದೇ ವಿವಾದವನ್ನು 2 ವರ್ಷದ ಕಾಲಮಿತಿಯಲ್ಲಿ ಇತ್ಯರ್ಥಗೊಳಿಸುವುದು ಕಡ್ಡಾಯವಾಗಲಿದೆ. ಇದರಿಂದ ಜಲ ಬಿಕ್ಕಟ್ಟಿನ ತ್ವರಿತ ಇತ್ಯರ್ಥ ಸಾಧ್ಯವಾಗಲಿದೆ ಎಂದು ಸಚಿವ ಪ್ರಕಾಶ್ ಜಾವಡೇಕರ್ ಮಾಹಿತಿ ನೀಡಿದ್ದಾರೆ.

## ಮತ್ತಷ್ಟು ತೀರ್ಮಾನಗಳು

- ಖಲಿಸ್ತಾನ್ ಬೆಂಬಲಿತ 'ಸಿಖ್ ಫಾರ್ ಜಸ್ಟಿಸ್' ಸಂಘಟನೆಯನ್ನು ಕಾನೂನುಬಾಹಿರ ಸಂಘಟನೆ ಎಂದು ಘೋಷಣೆ
- ರೈಲ್ವೆ ರಕ್ಷಣಾ ಪಡೆಗೆ (ಆರ್‌ಪಿಎಫ್) 'ಸಂಘಟಿತ ಗ್ರೂಪ್ ಎ ಸೇವೆ' ಸ್ಥಾನಮಾನ, ಹೆಚ್ಚು ಸೌಲಭ್ಯಗಳ ವಿಸ್ತರಣೆ
- ತೃತೀಯ ಲಿಂಗಿಗಳು ಸಮಾಜದಲ್ಲಿ ಎಲ್ಲರಂತೆ ಬೆರೆತು ಜೀವಿಸಲು ಅವಕಾಶ ನೀಡುವ ಮತ್ತು ತೃತೀಯ ಲಿಂಗಿಗಳಿಗೆ ಅಪಮಾನ, ತಾರತಮ್ಯದ ವಿರುದ್ಧ ಕಠಿಣ ಕ್ರಮಕ್ಕೆ ಅವಕಾಶ ನೀಡುವ 'ತೃತೀಯ ಲಿಂಗಿಗಳ ವಿಧೇಯಕ'ಕ್ಕೆ ಅಸ್ತು; ಹಾಲಿ ಸಂಸತ್ ಅಧಿವೇಶನದಲ್ಲಿ ಮಂಡನೆ ಸಾಧ್ಯತೆ
- ಅಕ್ರಮ ಠೇವಣಿಗಳ ಅಂಕುಶಕ್ಕೆ 'ಅನಿಯಂತ್ರಿತ ಠೇವಣಿ ಯೋಜನೆಗಳ ವಿಧೇಯಕ-2019'ಕ್ಕೆ ಅನುಮೋದನೆ
- ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ ಅಭಿವೃದ್ಧಿ; ಮಾರುಕಟ್ಟೆ, ಶಾಲಾ ಕಾಲೇಜು ಹಾಗೂ ಆಸ್ಪತ್ರೆಗಳಿಗೆ ಸಂಪರ್ಕ ಹೆಚ್ಚಿಸುವ ಉದ್ದೇಶದ 'ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ-3'ಜಾರಿಗೆ ಅನುಮೋದನೆ.